ಮ್ಯಾನೇಜರ್‌ಗೆ ಹಣ್ಣುಗಳನ್ನು ತಂದುಕೊಡಲು ಹೇಳಿದ್ರೂ ತಂದುಕೊಡುತ್ತಿರಲಿಲ್ಲ. ಆಮೇಲೆ ನಾನು ಗರ್ಭಿಣಿಯಾಗಿರೋದನ್ನು ತಿಳಿಸಿದ ಮೇಲೆ ಹಣ್ಣುಗಳನ್ನು ತಂದುಕೊಡಲು ಶುರು ಮಾಡಿದರು. ಸೆಟ್‌ನಲ್ಲಿದ್ದವರಿಗೆ ವಿಷಯ ಗೊತ್ತಾಯಿತು.

'ಪ್ರೀತಿ, ಪ್ರೇಮ, ಪ್ರಣಯ' ಸಿನಿಮಾಕ್ಕೆ ರಾಷ್ಟ್ರಪ್ರಶಸ್ತಿ ಬಂದ ಎರಡು ದಿನಕ್ಕೆ ಇಶಾ ಹುಟ್ಟಿದಳು. 'ಪ್ರಶಸ್ತಿ ಸ್ವೀಕರಿಸಲು ದೆಹಲಿಗೆ ಹೋಗಲ್ವಾ?' ಅಂತ ಅನೇಕರು ಕೇಳಿದ ಮೇಲೆ ನನಗೆ ಮಗುವಾಗಿರುವ ವಿಷಯ ಅವರಿಗೆಲ್ಲ ತಿಳಿಯಿತು. ಆಗ ಸುಮಾರು ಜನ 'ಇದೆಲ್ಲ ಹೇಗೆ?' ಅಂತ ಕೇಳಿದ್ರು. 'ನಾನು ಮದುವೆಯಾಗಿಲ್ಲ. ಸಿಂಗಲ್ ಪೇರೆಂಟ್. ಮಗು ಮಾಡಿಕೊಂಡೆ' ಅಂತ ಉತ್ತರಿಸಿದೆ. ಆಗೆಲ್ಲ ಏನು ಮಾತಾಡಿಕೊಂಡರೋ ಗೊತ್ತಿಲ್ಲ. ಗಾಂಧಿನಗರದ ಕೆಲವರು ನಾನು ಮದುವೆಯಾಗದೇ ಮಗು ಮಾಡಿಕೊಂಡ ಬಗ್ಗೆ ಮಾತಾಡಿಕೊಂಡರು ಅನ್ನುವ ವಿಷಯ ತಿಳಿಯಿತು. ಆದರೆ, ನಾನು ಯಾವುದಕ್ಕೂ ತಲೆಕೆಡಿಸಿಕೊಳ್ಳಲಿಲ್ಲ. ಇನ್‌ಫ್ಯಾಕ್ಟ್ ಯಾರಾದರೂ ನನ್ನ ಎದುರಿಗೇ ಮಾತಾಡಿದ್ದರೂ ನಾನು ಅವರಿಗೆ ಸರಿಯಾಗೇ ಹೇಳ್ತಾ ಇದ್ದೆ ಅನಿಸುತ್ತೆ. ಮುಖ್ಯವಾಗಿ ಅಪ್ಪ–ಅಮ್ಮ ಬಾಲ್ಯದಲ್ಲೇ ನಮ್ಮನ್ನು ಗಟ್ಟಿಯಾಗಿ ಬೆಳೆಸಿದ್ರು. ಸಮಾಜದಲ್ಲಿ ಯಾರು ಏನೇ ಅಂದರೂ ತಲೆ ಕೆಡಿಸಿಕೊಳ್ಳಬಾರದು. ನಿಮ್ಮ ಮನಸಿಗೆ ಸರಿ ಅನಿಸಿದರೆ ಹೆದರಬೇಕಿಲ್ಲ ಅಂತ. ಇನ್ನೊಬ್ಬರಿಗೆ ಮೋಸ ಮಾಡಿ ಯಾವ ಕೆಲಸವನ್ನೂ ನಾನು ಮಾಡಿಲ್ಲ. ಹಾಗಾಗಿ, ಜನರ ಮಾತುಗಳ ಬಗ್ಗೆ ಯೋಚಿಸಲಿಲ್ಲ. ಎಲ್ಲಕ್ಕಿಂತ ಮುಖ್ಯವಾಗಿ ನಮ್ಮ ಮನೆಯಲ್ಲಿ ಬೆಂಬಲವಿತ್ತು. ನನ್ನ ತಾಯಿಯ ತಮ್ಮನ ಕುಟುಂಬದವರೂ ಇಶಾಳನ್ನು ಅಷ್ಟೇ ಆದರದಿಂದ ಬರಮಾಡಿಕೊಂಡರು. ಈಗಲೂ ಮನೆಯವರಿಗೆ ಇಶಾ ಅಂದರೆ ತುಂಬಾ ಪ್ರೀತಿ.

ಆಗ ಇಶಾಗೆ ಮೂರ್ನಾಲ್ಕು ತಿಂಗಳಾಗಿತ್ತು. ಹೊಟ್ಟೆಯುಬ್ಬರವಾಗಿ ರಾತ್ರಿಯಿಡೀ ಅಳುತ್ತಿದ್ದಳು. ಮೊದಲೇ ವೈದ್ಯರು ಹೇಳಿದ್ದರು, ಮಗು ಈ ರೀತಿ ಅಳುತ್ತೆ ಅಂತ. ಆದರೆ, ಆ ಸ್ಥಿತಿ ಎದುರಾದಾಗ ನನಗೆ ಗಾಬರಿ, ಗೊಂದಲವಾಗಿತ್ತು. ಅಯ್ಯೋ, ನಾನು ನೋಡಿದರೆ ಎಷ್ಟೊಂದು ಕೆಲಸ ಮಾಡಬೇಕು ಅಂದುಕೊಂಡಿದ್ದೀನಿ. ಇವಳು ನೋಡಿದರೆ ಹೀಗೆ ಅಳ್ತಾ ಇದ್ದಾಳಲ್ಲ ಅಂತ... ಆದರೆ, ಮುಂದೆ ಅದೆಲ್ಲ ರೂಢಿಯಾಯಿತು. ಮತ್ತೊಂದು ಸಲ ಇಶಾಗೆ ನಾಲ್ಕು ವರ್ಷವಿದ್ದಾಗ ತುಂಬಾ ಹೊಟ್ಟೆನೋವಾಗಿ ಆಸ್ಪತ್ರೆಗೆ ಕರೆದೊಯ್ಯಬೇಕಿತ್ತು. ಆಗ ಅವಳನ್ನು ಎತ್ತಿಕೊಂಡೇ ಹೋಗಬೇಕಿತ್ತು. ಆಗ ಜತೆಯಲ್ಲಿ ಯಾರಾದರೂ ಇದ್ದಿದ್ದರೆ ಚೆನ್ನಾಗಿತ್ತು ಅಂತ ಅನಿಸಿತ್ತು. ಮುಂದೆ ಇಂಥ ಸಮಸ್ಯೆಗಳು, ಸವಾಲುಗಳು ಎದುರಾದಾಗ ಗಟ್ಟಿಯಾಗಿಯೇ ಎದುರಿಸಿದೆ.

ಇಶಾಳನ್ನು ಕನಕಪುರದ ವ್ಯಾಲಿ ಸ್ಕೂಲ್‌ಗೆ ಸೇರಿಸಲು ಹೊರಟಾಗ, ಅವಳ ತಂದೆ ವಿದೇಶಿಗ ಅಂತ ಆ ಶಾಲೆಯವರು ಫೀಜು ದುಪ್ಪಟ್ಟು ಕಟ್ಟಬೇಕು ಅಂದರು. 'ನಾನು ಮದುವೆಯಾಗಿಲ್ಲ. ಭಾರತದಲ್ಲೇ ಇರೋದು, ನಾನೇ ಫೀಜು ಕಟ್ಟೋದು' ಅಂದರೂ ಕೇಳಲಿಲ್ಲ. 'ನೀವು ಮದುವೆಯಾಗಿದ್ದಿರೋ ಇಲ್ಲವೋ ಬೇರೆ ವಿಚಾರ. ಆದರೆ, ನಿಮ್ಮ ಮಗಳು ಅಮೆರಿಕನ್. ಅವರ ತಂದೆಯೇ ಫೀಜು ಕಟ್ಟಬೇಕು' ಅಂದರು. ಆಗ ನಾನು ಶಾಲೆಯವರಿಗೆ 'ನಾನು ಇಶಾಳ ತಂದೆಯಿಂದ ಯಾವುದನ್ನೂ ನಿರೀಕ್ಷೆ ಮಾಡಲ್ಲ. ನನ್ನ ಮಗಳನ್ನು ನೋಡಿಕೊಳ್ಳುವ ಹಾಗೂ ಅವಳ ಶಾಲೆಯ ಫೀಜು ಕಟ್ಟುವ ತಾಕತ್ತು ನನಗೆ ಇದೆ' ಎಂದು ಮನವರಿಕೆ ಮಾಡಿಕೊಟ್ಟ ಮೇಲೆಯೇ ಶಾಲೆಯವರು ಒಪ್ಪಿ ಸೇರಿಸಿಕೊಂಡರು.

ಮತ್ತೊಂದು ಘಟನೆ, ಇಶಾಗೆ ಪಾಸ್‌ಪೋರ್ಟ್ ಮಾಡಿಸಲು ಹೋದಾಗ ಆಗಿದ್ದು. 'ನಾನು ಮದುವೆಯಾಗಿಲ್ಲ. ಗಂಡ ಇಲ್ಲ' ಅಂದೆ. ಅಲ್ಲಿನ ಅಧಿಕಾರಿಗಳು ಒಪ್ಪಲು ತಯಾರಿಲ್ಲ. ಅಲ್ಲಿನ ಫಾರಂಗಳಲ್ಲಿ ಈಗಲೂ ತಂದೆಯ ಹೆಸರು ಕಡ್ಡಾಯವಾಗಿದೆ. ಗಂಡ ಜತೆಗಿಲ್ಲ ಅಂದರೆ ವಿಚ್ಛೇದನವಾ, ನಾಪತ್ತೆಯಾ, ರೇಪ್ ಮಾಡಿ ಹೋಗಿದ್ದಾನಾ, ಕ್ರಿಮಿನಲ್ಲಾ... ಹೀಗೆ ಯಾವುದಾದರೊಂದು ಗಂಡಿನ ಹೆಸರಿನಲ್ಲಿ ಅರ್ಜಿಯಲ್ಲಿ ತುಂಬಬೇಕು. ಅಲ್ಲ, ಒಬ್ಬ ಹೆಣ್ಣಿಗೆ ಸ್ವಂತ ಆಲೋಚನಾ ಶಕ್ತಿ, ಗುರುತು ಇಲ್ಲವಾ? ಆರ್ಥಿಕ ಬಲ ಇಲ್ಲವಾ? ಇಂದಿಗೂ ನಾವು ಗಂಡಸಿನ ಹೆಸರು ಹೇಳಿಕೊಂಡು ಇರಬೇಕಲ್ಲ. ಇದನ್ನೆಲ್ಲ ಬದಲಾಯಿಸಲು ತುಂಬಾ ವರ್ಷಗಳೇ ಬೇಕಾಗುತ್ತವೆ.

ಗೌರಿ ಹತ್ಯೆ ಪ್ರಕರಣದಲ್ಲಿ ಕೋರ್ಟ್‌ಗೆ ಹೋದಾಗ ಅಲ್ಲಿನ ವಕೀಲರು, ನನ್ನ ಮದುವೆ, ಮಗಳ ಬಗ್ಗೆ ಪ್ರಶ್ನಿಸಿದರು. ಜಡ್ಜ್‌ಗೆ 'ಇವರು ಮದುವೆಯಾಗದೇ ಮಗು ಮಾಡಿಕೊಂಡಿದ್ದಾರೆ' ಅಂತ ಹೇಳಿದರು. ಆಗ ಜಡ್ಜ್, 'ಇದೆಲ್ಲ ಏಕೆ ಬೇಕು ನಿಮಗೆ' ಅಂತ ವಾಪಸ್ ವಕೀಲರಿಗೆ ಬಿಸಿಮುಟ್ಟಿಸಿದರು. ಆಗ ನಾನು ಜಡ್ಜ್‌ಗೆ ಕೇಳಿದೆ: 'ಇಂಥ ಪ್ರಶ್ನೆಗಳೆಲ್ಲ ಈಗಲೂ ಬೇಕಾ' ಅಂತ. ಮಹಿಳೆ ಮದುವೆಯಾಗದೇ ಮಕ್ಕಳು ಮಾಡಿಕೊಂಡಿದ್ದರೆ ಅವಳು ಕೆಟ್ಟವಳು ಅಂತ ಹೀಯಾಳಿಸಲು ಇಂಥ ಪ್ರಶ್ನೆಗಳನ್ನು ಕೇಳುತ್ತಾರೆ. ಅದೇ ಗಂಡಸು ಎಲ್ಲಾ ಕಡೆ ಹೋಗಿ ಏನು ಮಾಡಿದರೂ ಸರಿ. ಈ ಮನಸ್ಥಿತಿ ನಮ್ಮಲ್ಲಿ ಬದಲಾಗಬೇಕಿದೆ.

ಪೇರೆಂಟ್ಸ್ ಮೀಟಿಂಗ್ ಹೋದಾಗ ಬೇಸರ ಅನಿಸುತ್ತೆ ನಿಜ. ಆದರೆ, ಅದೇ ಸಮಯದಲ್ಲಿ ಮಗಳನ್ನು ನೋಡಿ ಸಂತೋಷವೂ ಆಗುತ್ತದೆ. ಎಲ್ಲರ ಮದುವೆಯೂ ಪರ್ಫೆಕ್ಟ್ ಆಗಿರಲ್ಲ. ಎಷ್ಟೊಂದು ಕಾಂಪ್ರಮೈಸ್ ಆಗಿರಬೇಕು. ಇದನ್ನೆಲ್ಲ

## ಏಂಜಲಿನಾ ಜೋಲೀ

ಅಮೆರಿಕ ಪ್ರಸಿದ್ಧ ನಟಿ ಏಂಜಲಿನಾ ಜೋಲೀ ಆರು ಮಕ್ಕಳ ತಾಯಿ. ಎರಡು ಮದುವೆಗಳು ಮುರಿದಿದ್ದವು. ನಟ ಬ್ರ್ಯಾಡ್ ಪಿಟ್ ಜೊತೆ ಸಂಬಂಧದ ಹೊತ್ತಿಗೆ ಮೂರು ಮಕ್ಕಳನ್ನು ಹೆತ್ತು, ಮೂರು ಮಕ್ಕಳನ್ನು ದತ್ತು ಪಡೆದಿದ್ದ ಜೋಲೀ, ಬ್ರ್ಯಾಡ್ ಪಿಟ್ ಜೊತೆಗೂ ವಿಚ್ಛೇದನ ಪಡೆದ ನಂತರ ಒಬ್ಬರೇ ಮಕ್ಕಳ ಹೊಣೆ ಹೊತ್ತರು.

ತಮ್ಮ ಸಂಬಂಧಗಳ ನಡುವಿನ ಬಿರುಕು ತಮ್ಮ ಮಕ್ಕಳ ಮೇಲೆ ಯಾವುದೇ ಪರಿಣಾಮ ಬೀರಬಾರದು ಎಂದು ಪ್ರಜ್ಞಾಪೂರ್ವಕವಾಗಿದ್ದ ಜೋಲೀ, ಪ್ರೀತಿ ತುಂಬಿದ ಪರಿಸರ ಮಕ್ಕಳಿಗೆ ಬೇಕೆಂದು ಅದರ ಮೇಲಷ್ಟೆ ಗಮನ ನೀಡಿದರು. ನಟಿ ಮಾತ್ರವಲ್ಲದೆ, ಮಾನವತಾವಾದಿಯೂ ಆಗಿದ್ದ ಅವರು ಯುಎನ್‌ಎಚ್‌ಸಿಆರ್ ರಾಯಭಾರಿ ಆಗಿದ್ದರು. ಹೀಗಾಗಿ ತಮ್ಮನ್ನು ರೂಪಿಸಿದ ಸಮಾಜಕ್ಕೆ ಕೊಡುಗೆ ನೀಡಬೇಕಾದ ಅಗತ್ಯವನ್ನು ಮಕ್ಕಳಲ್ಲಿ ತುಂಬಿದರು.




ಒಬ್ಬಂಟಿಯಾಗಿ ಮಕ್ಕಳನ್ನು ಬೆಳೆಸುವಲ್ಲಿ ಇರುವ ಸವಾಲು ಹಾಗೂ ಖುಷಿಗಳನ್ನು ಸಂದರ್ಶನವೊಂದರಲ್ಲಿ ಹಂಚಿಕೊಂಡಿದ್ದರು ಜೋಲೀ. 'ಬೆಳಿಗ್ಗೆ ಏಳುತ್ತಿದ್ದಂತೆ ಮಕ್ಕಳು ಆರಾಮಿದ್ದಾರಾ ಎಂಬುದು ತಾಯಿ ಆದವಳ ಮುಂದೆ ತಕ್ಷಣ ಬರುವ ಸಂಗತಿ. ನನ್ನ ಏಕಾಂತವನ್ನು ದೂರವಿಡಲು ತಾಯ್ತನ ಸಹಾಯ ಮಾಡಿದೆ. ತಾಯಿ ಆಗುವುದು ಎಲ್ಲ ಖುಷಿಯೂ ಹೌದು. ಬದುಕಿನಲ್ಲಿ ಬಂದ ಎಷ್ಟೋ ಕತ್ತಲುಗಳನ್ನು ಗೊತ್ತಿಲ್ಲದೇ ಮಾಯ ಮಾಡಿದ್ದಾರೆ ಮಕ್ಕಳು' ಎಂದಿದ್ದರು.

'ತಾಯಿಯಾಗುವುದು ಅತಿ ಸುಂದರ ಸಂಗತಿ. ನಿಮ್ಮ ಜೀವನದಲ್ಲಿ ನಿಮ್ಮನ್ನು ಹೊರತಾಗಿಸಿ ಯೋಚಿಸುವುದು ತಾಯಿಯಾದಾಗಲೇ. ತುಂಬಾ ಬೇಸರವಾದಾಗ ಮಕ್ಕಳು ನೀಡುವ ಒಂದು ಅಪ್ಪುಗೆಯಿಂದ ಎಲ್ಲವೂ ಸರಿಹೋದ ಭಾವ ತರುತ್ತಿತ್ತು' ಎಂದು ಹೇಳಿಕೊಂಡಿದ್ದರು.